

# ದೇಶದಲ್ಲಿ ಹೆಚ್ಚಾಗುವ ಆತ್ಮಹತ್ಯೆಗಳು



ನುಡಿಯಲ್ಪಟ್ಟ ಪ್ರವಾದನೆ

ದೇಶದಲ್ಲಿ ಮುಂದೆ ನಡೆಯಲಿರುವ ಭಯಾನಕ, ಆತ್ಮಹತ್ಯೆಗಳು. ಕೊಲೆಗಳು ಹೇಗೆ ಹೇರಳವಾಗಿ ಹೆಚ್ಚುತ್ತವೆಯೋ, ಹಾಗೆಯೇ ಆತ್ಮಹತ್ಯೆಗಳು ಕೂಡ ಹೇರಳವಾಗಿ ನಡೆಯುತ್ತವೆ ಎಂದು ಕರ್ತನು ಹೇಳುತ್ತಾನೆ. ಅನೇಕ ವಿಧಾನದಲ್ಲಿ ಆತ್ಮಹತ್ಯೆದ ಆತ್ಮಗಳು ಬಿಚ್ಚಿಬಿಡಲ್ಪಡುತ್ತವೆ ಅವು ರೈತರ ಬಳಿ ಮಾತ್ರವಲ್ಲ ವ್ಯಾಪಾರಿಗಳ ಬಳಿಯೂ ಹರಡುತ್ತವೆ ದೊಡ್ಡ ದೊಡ್ಡ ಸಂಸ್ಥೆಗಳಲ್ಲಿ ಕೆಲಸ ಮಾಡುವವರ ಬಳಿಯೂ ಹರಡಲಿವೆ, ಶಾಲಾಮಕ್ಕಳ ಮೇಲೆ ಅವು ವೇಗವಾಗಿ ಹರಡಲಿವೆ. ಕುಟುಂಬಸ್ಥರ ರ ನಡುವೆ ಹರಡಲಿವೆ ಸಾಲ ಕೊಟ್ಟವರ ಬಳಿಯೂ ಸಾಲ ತಕ್ಕೊಂಡವರ ಬಳಿಯೂ ಇಗೋ ಆತ್ಮಹತ್ಯೆದ ಆತ್ಮಗಳು ಬಹು ತೀವ್ರವಾಗಿ ಬರುತ್ತಲಿವೆ. ಯೌವ್ವನಸ್ಥರ ನಡುವೆಯೂ, ವೃದ್ದರ ನಡುವೆಯೂ ಸಹ ಅವು ತೀವ್ರವಾಗಿ ಬರುತ್ತಿವೆ. ಮನ ಕುಂದಿಸುವ ಆತ್ಮವೊಂದು ಅನೇಕರ ಹೃದಯವನ್ನು ಹತ್ತಿಹಿಡಿದು ಅವರನ್ನು ಆತ್ಮಹತ್ಯೆಗೆ ನೇರವಾಗಿ ಮುನ್ನಡೆಸುತ್ತದೆ. ದೇಶದಲ್ಲಿ ಉಂಟಾಗುವ ಕೇಡುಗಳಿಂದಲೂ, ಬಡತನದಿಂದಲೂ, ನಿರುದ್ಯೋಗದಿಂದಲೂ, ಆರ್ಥಿಕ ಬೆಳವಣಿಗೆಯ ಕುಸಿತದಿಂದಲೂ ಇನ್ನು ಮುಂದೆ ತಮ್ಮನ್ನು ತಾವೇ ಆತ್ಮಹತ್ಯೆ ಮಾಡಿಕೊಂಡು ಸಾಯುವವರ ಸಂಖ್ಯೆ ಹೆಚ್ಚುತ್ತವೆ . ಇವುಗಳನ್ನು ಪ್ರೇರೇಪಿಸುವ ದುಷ್ಟ ಆತ್ಮಗಳು ದೇಶದ ಮೇಲೆ ಅಧಿಕಾರವನ್ನು ಹೊಂದಿವೆ. ಈ ಆತ್ಮಗಳಿಗೆ  ಬೇಡಿಗಳನ್ನು ಹಾಕಿ, ಮೂಗುದಾರ ಹಾಕಿ ಎಳೆಯುವವನು, ಕಟ್ಟುವವನು, ತುಳಿಯುವವನು, ತಳ್ಳುವವನು, ಎಲ್ಲಿ ಎಂದು ಕರ್ತನು ಕೇಳುತ್ತಾನೆ. ಬೇಗನೆ ಭಾರತ  ದೇಶವೇ ಆತ್ಮಹತ್ಯೆಗೆ ಮೊದಲ ಸ್ಥಾನದಲ್ಲಿದೆ ಎಂಬ ಈ ಮಾತನ್ನು ನೀವು ಅತೀಬೇಗನೆ ಕೇಳಲಿದ್ದೀರ. ಅದನ್ನು ಕೇಳುವದಕ್ಕೂ ಮುಂಚೆ, ತಡೆಗಟ್ಟುವವನು ಎದ್ದರೆ ಒಳ್ಳೆದು ಎಂದು ಕರ್ತನು ಹೇಳುತ್ತಾನೆ. ದೇಶಕ್ಕೆ ಒಳ್ಳೆದು ಮಾಡುತ್ತೇವೆಂದು ಹೇಳಿ, ವಿಷವನ್ನು ಜನಗಳಿಗೆ ತಿನ್ನಲು ಕೊಡುವ ದುರ್ಜನರು ತಮ್ಮ ದುಷ್ಟ ಕಾರ್ಯಗಳನ್ನು ಇನ್ನೂ ತೀವ್ರವಾಗಿ ನಡೆಸುವರು ದೇಶದ ಜನಗಳಿಗೆ ಕೆಡಕು ಮಾಡಲು ನೆನೆಸುವ ಈ ದುರ್ಜನರಿಗೆ ವಿರುದ್ಧವಾಗಿ ತನ್ನ ಖಡ್ಗವನ್ನು ಎತ್ತುವವನೂ, ತನ್ನ ಪ್ರಾರ್ಥನೆಯನ್ನು ತ್ವರಿತಗೊಳಿಸುವವನೂ, ಆ ಆತ್ಮಗಳನ್ನು ಕಟ್ಟುವವನೂ ಎದ್ದರೆ ಒಳ್ಳೆದು ಆದರೆ,ನನ್ನ ಜನರು ಉದಾಸೀನರಾಗಿ ತಮ ಜೀವನವನ್ನು ಮಾತ್ರ ಸ್ವಾರ್ಥವಾಗಿ ಜೀವಿಸಿದರೆ ದೇಶವು ಕೆಟ್ಟುಹೋಗುತ್ತದಲ್ಲವೇ? ಮತ್ತೂ, ಸಭೆಯೆಂಬದು ತನ್ನ ಉದಾಸೀನತೆಯನ್ನು ಬಿಟ್ಟು ನನ್ನನ್ನೂ ಹುಡುಕುವದರಿಂದಲ್ಲವೇ ದೇಶ ಬದುಕುತ್ತದೆ ಎಂದು ಕರ್ತನು ಹೇಳುತ್ತಾನೆ.(ಪ್ರಕಟಿಸಲ್ಪಟ್ಟ ದಿನ 15.08.2015 ರಾಮನಾಥಪುರಂ)

## ಪ್ರಾರ್ಥನಾ ಮನವಿ

01. ದೇಶದಲ್ಲಿ ನಡೆಯುವಂತ ಆತ್ಮಹತ್ಯೆಗಳನ್ನು ತಡೆದು ನಿಲ್ಲಿಸಲಿಕ್ಕಾಗುವಂತೆ ನೇರಮೊಣಕಾಲಿನಲ್ಲಿ ನಿಂತು ಪ್ರಾರ್ಥಿಸುವ ದೇವರ ಮಕ್ಕಳನ್ನು, ದೇವರು ಸಭೆಯಲ್ಲೂ ತನ್ನ ಜನರ ನಡುವೆಯೂ ಹೇರಳವಾಗಿ ಎಬ್ಬಿಸಲಿಕ್ಕಾಗುವಂತೆಯೂ ಪ್ರಾರ್ಥಿಸಿರಿ.

02. ಆತ್ಮಹತ್ಯೆ ಹೆಚ್ಚಲು ಕಾರಣವಾಗಿರುವ ಆರ್ಥಿಕ ಬಿಕ್ಕಟ್ಟು, ವ್ಯವಸಾಯದಲ್ಲಿ ಉಂಟಾಗುವ ಅನಾಹುತಗಳು, ಬರಗಳು, ನಿರುದ್ಯೋಗ ಸಮಸ್ಯೆಗಳು ಇಲ್ಲದಂತಾಗುವಂತೆಯೂ, ದೇವರು ದೇಶದಲ್ಲಿ ಸಮೃದ್ಧಿಯನ್ನುಂಟುಮಾಡುವಂತೆಯೂ ಪ್ರಾರ್ಥಿಸಿರಿ.

03. ಆತ್ಮಹತ್ಯೆಗೆ ನೇರವಾಗಿ ಜನರನ್ನು ಮುನ್ನಡೆಸಲು ಮರೆಯಾಗಿ ವಂಚಿಸುವ,, ಮನಸ್ಸನ್ನು ಕುಂಟಿತಗೊಳಿಸುವ ದುಷ್ಟ ಆತ್ಮಗಳು ಕಟ್ಟಲ್ಪಡುವಂತೆಯೂ ಮನುಷ್ಯನ ಜೀವವನ್ನು ಕೊಲೆ ಮಾಡಲು, ಅವುಗಳು ಮಾಡುವ ಯಾವ ತಂತ್ರಗಳು ನಡೆಯದ ಹಾಗೆ ಭಾರದಿಂದ ಪ್ರಾರ್ಥಿಸಿರಿ.

04. ಜನರ ಮರಣವನ್ನು ಇಚ್ಚಿಸುವ ಈ ದುಷ್ಟ ಆತ್ಮಗಳು ದೇಶದಲ್ಲಿ ಕಾರ್ಯಮಾಡಲು ಉಪಯೋಗಿಸುವ ಮನುಷ್ಯರನ್ನು, ದೇವರು ಸಂಧಿಸುವಂತೆ ಪ್ರಾರ್ಥಿಸಿರಿ. ಅವರು ಅಧಿಕಾರದಲ್ಲಿದ್ದರೂ,  ಆಳ್ವಿಕೆ ಮಾಡುತ್ತಿದ್ದರೂ,  ಅವರನ್ನಿಟ್ಟು ಸೈತಾನನು ಮಾಡಲು ನೆನೆಸಿರುವಂತ ಪ್ರತಿಯೊಂದು ಕಾರ್ಯವು ನಡೆಯಲಿಕ್ಕಾಗದಂತೆ ದೇವರು ತಡೆಮಾಡುವಂತೆ ಪ್ರಾರ್ಥಿಸಿರಿ.

05. ದೇಶದಲ್ಲಿ ದುಷ್ಟ ಕಾರ್ಯಗಳು ಬಿಚ್ಚಿಬಿಡಲ್ಪಡುವದಕ್ಕೂ, ದುಷ್ಟ ಮನುಷ್ಯರು ಎದ್ದು ದೇಶದಲ್ಲಿ ಅಧಿಕಾರವನ್ನು ಹೊಂದುವದಕ್ಕೂ ದೇಶದಲ್ಲಿರುವಂತ ಜನಗಳೂ, ಸಭೆಗಳೂ ಕಾರಣ. ಇವರು ತಮ್ಮ ಜವಾಬ್ದಾರಿಯನ್ನು ತಿಳಿದು ತಮ್ಮ ಉದಾಸೀನತೆಯನ್ನು ಬಿಟ್ಟು ದೇಶಕ್ಕಾಗಿ ಎದ್ದು ಒಡಕಿನಲ್ಲಿ ನಿಲ್ಲುವ ಪ್ರಜ್ಞೆಯನ್ನು ಹೊಂದಲಿಕ್ಕಾಗುವಂತೆ ಪ್ರಾರ್ಥಿಸಿರಿ.